# ಶ್ರೀ ಅಕ್ಷೋಭ್ಯತೀರ್ಥರು ಮತ್ತು ಶ್ರೀಜಯತೀರ್ಥರ ಬಗ್ಗೆ ವಿವಾದಕ್ಕೆ ಉತ್ತರ–

ಪರಿಮಳ ಮಾಸಪತ್ರಿಕೆಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳ ಪತ್ರಿಕೆಯಲ್ಲಿ ಪ್ರಕಟವಾಗಿರುವ ಶ್ರೀ ಕಾಕೋಳು ರಾಘವೇಂದ್ರರ ಲೇಖನದ ಸತ್ಯಾಸತ್ಯತೆ ಬಗ್ಗೆ ಒಂದು ಜಿಜ್ಞಾಸೆ –

ಶ್ರೀ ಕಾಕೋಳು ರಾಘವೇಂದ್ರರು ತಮ್ಮ ಮನಸ್ಸಿನಲ್ಲಿ ಬಂದಿರುವ ಹಲವಾರು ಪ್ರಶ್ನೆಗಳನ್ನು ಮುಂದಿಟ್ಟು ಎಲ್ಲರನ್ನೂ ತಪ್ಪು ಮಾಹಿತಿಗೆ ಒಳಗಾಗುವಂತೆ ಮಾಡಿದ್ದಾರೆ.

**ಮೊದಲನೆಯದಾಗಿ ಅವರು ಜಯತೀರ್ಥರ ಆಶ್ರಮದ ಬಗ್ಗೆ ಹೀಗೆ ಹೇಳಿದ್ದಾರೆ –**
ರಘುನಾಥಭಟ್ಟ ದಂಪತಿಗಳು ತಮ್ಮ ಮಗ ನರಸಿಂಹಭಟ್ಟನನ್ನು ಶ್ರೀ ಅಕ್ಷೋಭ್ಯತೀರ್ಥರಿಗೆ ಒಪ್ಪಿಸಿ "ಇಂದಿನಿಂದ ಇವ ನಿಮ್ಮವ, ಇವನಿಗೆ ಸನ್ಯಾಸ ನೀಡಲು ನಮ್ಮ ಸಮ್ಮತಿ ಇದೆ" ಎಂದರು. ಅಕ್ಷೋಭ್ಯತೀರ್ಥರು ಒಂದು ಶುಭದಿನ – ಶುಭಗಳಿಗೆಯಲ್ಲಿ ನರಸಿಂಹನಿಗೆ ಭೀಮಾ ನದಿ ನಡುಗಡ್ಡೆಯಲ್ಲಿ ಸನ್ಯಾಸ ಧರ್ಮದ ತಾರಕಮಂತ್ರವೆಂದು ಕರೆಸಿಕೊಳ್ಳುವ ಪ್ರಣವಮಂತ್ರವನ್ನುಪದೇಶಿಸಿ, "ಜಯತೀರ್ಥ"ರೆಂದು ನಾಮಕರಣ ಮಾಡಿದರೆಂದಿದ್ದಾರೆ.

ಆದರೆ ಕಾಕೋಳು ರಾಘವೇಂದ್ರರು ಈ ಕಥೆಯನ್ನು ಎಲ್ಲಿಂದ ಸಂಗ್ರಹಿಸಿದ್ದಾರೆಂದು ಹೇಳಿಲ್ಲ. ಪ್ರಚಲಿತವಿರುವ ಕಥೆಯನ್ನೇ ತಮ್ಮ ಅನುಮಾನಕ್ಕೆ ಹೊಂದುವಂತೆ ಬದಲಾಯಿಸಿದ್ದಾರೆ.

ಮೂಲಕಥೆಯಲ್ಲಿ ಅವರ ತಂದೆ ಜಯತೀರ್ಥರ ಸನ್ಯಾಸಾಶ್ರಮದ ಬಗ್ಗೆ ಬಹಳ ಕೋಪಗೊಂಡಿದ್ದರೆಂದೂ, ಅವರಿಗೆ ಸ್ವಲ್ಪವೂ ಸಮಾಧಾನವಿರಲಿಲ್ಲವೆಂದೂ, ನಂತರ ಜಯತೀರ್ಥರನ್ನು ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಅವರನ್ನು ದಾಂಪತ್ಯಕ್ಕೆ ಒಂದು ಮಾಡಲು ಪ್ರಯತ್ನಿಸಿ, ವಿಫಲರಾಗಿ, ನಂತರ ವಿಧಿಯಿಲ್ಲದೆ ಅಕ್ಷೋಭ್ಯತೀರ್ಥರ ಬಳಿ ಒಪ್ಪಿಸಿದರೆಂದು ಇದೆ. ಆದರೆ ನಮ್ಮ ಅನುಮಾನಕ್ಕೆ ಒಪ್ಪುವಂತೆ ಕಥೆಯನ್ನೇ ಬದಲಾಯಿಸಲಾಗುವುದೇ?

ಮೂಲಕಥೆಯ ಮೇಲೆ ಹಲವಾರು ಪ್ರಶ್ನೆಗಳನ್ನು ಕೇಳಿದ್ದಾರೆ. ಅನುಮಾನದ ಪ್ರಶ್ನೆಗಳು ಹೀಗಿವೆ –

1. ದೊಂಡೂರಾಯನು ಒಂದು ದಿನ, ದಾರಿಯಲ್ಲಿ ಬಾಯಾರಿಕೆಯಾಗಿ, ಕುದುರೆಯ ಮೇಲೆ ಕುಳಿತೇ, ಭೀಮಾ ನದಿಗೆ ಇಳಿದು ನೀರನ್ನು ಕುಡಿದರು. ಭೀಮಾನದಿ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ಬೇಸಿಗೆಯಲ್ಲಿ ಭೂಮಿ ಮಟ್ಟದಲ್ಲೇ ನಿಧಾನವಾಗಿ ಚಲಿಸುತ್ತದೆ. ತುಂಬಿ ಹರಿಯುವಾಗಲೇ ಅದು ಸೊಂಟದ ಮಟ್ಟಿಗೆ ಮಾತ್ರ ಇರುತ್ತದೆ. ಆದ್ದರಿಂದ ಕುದುರೆ ಮೇಲೆ ಕುಳಿತು ಜಲಪಾನ ಮಾಡುವುದು ಹೇಗೆ?

**ಉತ್ತರ** – ನೀರು ಸೊಂಟದ ಮಟ್ಟಿಗೆ ಮಾತ್ರ ಇತ್ತು ಎಂದು ಇವರಿಗೆ ಹೇಗೆ ಕಲ್ಪನೆಯಾಯಿತು. ಯಾವ ಗ್ರಂಥದಲ್ಲಿ ಆರೀತಿ ಬರೆದಿದೆ? ಅದು ಅಕಸ್ಮಾತ್ ಬೇಸಿಗೆಯಾದರೂ ಕೂಡ ನೀರು ತುಂಬಿ ಹರಿಯಬಾರದೆಂದು ನಿಯಮವೇನೂ ಇಲ್ಲವಲ್ಲ. ಈವರ್ಷ 2011ರ ಬೇಸಿಗೆಯ ಏಪ್ರಿಲ್ ಮತ್ತು ಮೇ ತಿಂಗಳಲ್ಲೇ ಕರ್ನಾಟಕ, ತಮಿಳುನಾಡು, ಆಂಧ್ರದಾದ್ಯಂತ ನಿರಂತರ ಭಾರಿ ಮಳೆಯಾಗಿದ್ದು ನಾವು ಕಣ್ಣಾರೆ ಕಂಡಿದ್ದೇವೆ. ಹಲವಾರು ನದಿಗಳು ತುಂಬಿ ಹರಿದಿವೆ ಬೇಸಿಗೆಯಲ್ಲೇ. ಆದ್ದರಿಂದ ಭೀಮಾನದಿಯೂ ಕೂಡ ಆ ಸಂದರ್ಭದಲ್ಲಿ ನೀರು ತುಂಬಿ ಹರಿದಿರಬಹುದು. 700 ವರ್ಷಗಳ ಹಿಂದೆ ಈಗಿನ ಪರಿಸ್ಥಿತಿಯೇ ಇತ್ತೆಂದು ಇವರ ಕಲ್ಪನೆಗೆ ಹೇಗೆ ಬಂದಿತೋ ಅದಕ್ಕೆ ಸಕಾರಣವನ್ನು ಅವರು ಕೊಟ್ಟಿಲ್ಲದಿರುವುದರಿಂದ ಅವರ ಕಲ್ಪನೆಯನ್ನು ಒಪ್ಪಲಾಗುವುದಿಲ್ಲ.

ಇಲ್ಲಿ ಜಯತೀರ್ಥರು ನೀರಿಗೆ ಇಳಿದು ನೀರು ಕುಡಿದರೆಂದು ಹೇಳಿರುವ ಹಲವಾರು ದಾಖಲೆಗಳು ಹೀಗಿವೆ –

೧. ಶ್ರೀ ಜಯತೀರ್ಥರ ನೇರ ಶಿಷ್ಯರಾದ ಶ್ರೀ ವ್ಯಾಸತೀರ್ಥರು (ಸುಮಾರು ಕ್ರಿ.ಶ.1350 – 1400 ತಮ್ಮ **"ಜಯತೀರ್ಥ ವಿಜಯ"** ಮತ್ತು **"ಅಣು ಜಯತೀರ್ಥ ವಿಜಯ"**ದಲ್ಲಿ ಶ್ಲೋಕ ಸಂಖ್ಯೆ 7 ರಲ್ಲಿ

೨. ರಾಘವೇಂದ್ರ ಮಠದ ದಾಖಲೆ ಗ್ರಂಥವೆಂದು ಹೆಸರಾಗಿರುವ "ಗುರುಚರಿತೆ"ಯಲ್ಲಿ ಹೇಳಲಾಗಿದೆ.

೩. ಕೂಡಲಿ ಅಕ್ಷೋಭ್ಯತೀರ್ಥಮಠದ ಶ್ರೀರಘುದಾಂತತೀರ್ಥರು ತಮ್ಮ **"ಶ್ರೀ ಜಯತೀರ್ಥವಿಜಯ"** ದಲ್ಲಿ ಸಂಗ್ರಹಿಸಿದ್ದಾರೆ

೪. ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯರು ತಮ್ಮ "ಶ್ರೀ ಜಯತೀರ್ಥದರ್ಶನ"ದಲ್ಲಿ

೫. ಶ್ರೀ ಕೊರಟೆ ಶ್ರೀನಿವಾಸರಾಯರು ತಮ್ಮ **"ಶ್ರೀ ಜಯತೀರ್ಥರು"** ಗ್ರಂಥದಲ್ಲಿ ಸಂಗ್ರಹಿಸಿದ್ದಾರೆ

೬. ಶ್ರೀವೈಶ್ವನಾಥಿ ನಾರಾಯಣಪಂಡಿತಾಚಾರ್ಯರು ತಮ್ಮ **ಜಯತೀರ್ಥ ಮಂಗಲಾಷ್ಟಕದಲ್ಲಿ** (ಶ್ಲೋಕ 2) ಹೇಳಿದ್ದಾರೆ.

೭. ಶ್ರೀ ಬಿ.ಎನ್.ಕೆ ಶರ್ಮರು ತಮ್ಮ ಗ್ರಂಥದಲ್ಲಿ ಸಂಗ್ರಹಿಸಿದ್ದಾರೆ

೮. ಶ್ರೀ ಗುರ್ಜಾಲಾಚಾರ್ಯರ **"ಶ್ರೀ ಟೀಕಾಕೃತ್ಪಾದಾಷ್ಟಕದಲ್ಲಿ"**

೯. ಶ್ರೀ ವ್ಯಾಸವಿಠಲರ ಕೃತಿ **"ದಯದಿ ಪಾಲಿಸೋ ಜಯತೀರ್ಥರಾಯ"** ಕೃತಿಯಲ್ಲಿ

## 2. "ಕಿಂ ಪಶು: ಪೂರ್ವದೇಹೇ" – ಅಕ್ಷೋಭ್ಯತೀರ್ಥರು ಧೋಂಡೂರಾಯನನ್ನು ಕುದುರೆಯ ಮೇಲೇ ಕುಳಿತು ನೀರು ಕುಡಿದುದನ್ನು ಕಂಡು "ಕಿಂ ಪಶು: ಪೂರ್ವದೇಹೇ" ವಿಚಾರದಲ್ಲಿ ಜಯತೀರ್ಥರಿಗೆ ಬಂದ ಜ್ಞಾನದ ಬಗ್ಯೆ ಅನುಮಾನ ಪ್ರದರ್ಶಿಸಿದ್ದಾರೆ –

ಉತ್ತರ – ಏಕೆ ಸಾಧ್ಯವಿಲ್ಲ. ಹಲವಾರು ಉದಾಹರಣೆಗಳಿವೆ

೧. ಕಾಳಿದಾಸನು ಕಾಳಿಕಾದೇವಿಯಿಂದ ಅನುಗ್ರಹಿತನಾದ ಕೂಡಲೇ ಒಬ್ಬ ಪ್ರಸಿದ್ದ ಕವಿಯಾಗಲಿಲ್ಲವೇ?
೨. "ಹರಿವಂಶ"ದಲ್ಲಿ ಬರುವ ಕಥೆಯಲ್ಲಿ ಒಬ್ಬ ಬ್ರಾಹ್ಮಣನಿಂದ ಒಂದು ಪತ್ರವನ್ನು ಓದಿಸಿದ ಕೂಡಲೇ ತನ್ನ ಪೂರ್ವಜನ್ಮದ ಕಥೆ ನೆನಪಾಗಲಿಲ್ಲವೇ?
೩. ದಾಸಪ್ಪನಾಗಿದ್ದ ವಿಜಯದಾಸರು ದಾಸಶ್ರೇಷ್ಟರಲ್ಲೊಬ್ಬರಾಗಲಿಲ್ಲವೇ?
೪. ವಿಜಯದಾಸರು ಒಬ್ಬ ಸಾಮಾನ್ಯ ಮನುಷ್ಯನ ತಲೆಯನ್ನು ಸ್ಪರ್ಶಿಸಿದ ಕೂಡಲೇ ಅವನು ಸುಧಾ ವ್ಯಾಕ್ಯಾನ ಮಾಡಲಿಲ್ಲವೇ?
೫. ರಾಯರ ಹೆಸರನ್ನು ಸ್ಮರಿಸಿದ ವೆಂಕಣ್ಣ ದಿವಾನನಾಗಲಿಲ್ಲವೇ?

ಅದೇ ರೀತಿ ಜಯತೀರ್ಥರೂ ತಮ್ಮ ಪೂರ್ವ ಜನ್ಮದ ಸ್ಮೃತಿಯನ್ನು ಪಡೆದಿರಬಹುದು. ಒಬ್ಬ ಸಾಮಾನ್ಯ ಕವಿ ಕಾಳಿದಾಸನೇ ಕ್ಷಣಮಾತ್ರದಲ್ಲಿ ಕವಿಯಾಗಬೇಕಾದರೆ, ಇಂದ್ರಾಂಶ ಸಂಭೂತರಾದ ಶ್ರೀ ಜಯತೀರ್ಥರು ತಮ್ಮ ಪೂರ್ವ ಜನ್ಮದ ಸ್ಮೃತಿಯನ್ನು ಪಡೆದು ಉತ್ತಮ ಜ್ಞಾನಿಯಾಗಬಾರದೇ?

### 3. ಧೋಂಡೂರಾಯನು ಸನ್ಯಾಸವನ್ನು ಸ್ವೀಕರಿಸಿದ್ದು ಶಾಸ್ತ್ರ ಸಮ್ಮತವಾಗಿತ್ತೆ? ಎಲ್ಲ ಶಾಸ್ತ್ರ ಕಾರ್ಯಗಳನ್ನೂ ಅನುಸರಿಸಲಾಗಿತ್ತೆ?

ಉತ್ತರ –

೧. ರಾಯರ ಮಠದ 'ಗುರುಚರಿತೆ'ಯಲ್ಲಿ ವಿದ್ಯುಕ್ತವಾಗಿ ನಡೆಯಿತೆಂದು ಬರೆದಿದ್ದಾರೆ

೨. ಶ್ರೀ ಜಯತೀರ್ಥರ ನೇರ ಶಿಷ್ಯರಾದ ಶ್ರೀವ್ಯಾಸತೀರ್ಥರು ತಮ್ಮ "ಅಣು ಜಯತೀರ್ಥವಿಜಯ"ದಲ್ಲಿ ಶ್ಲೋಕ 9ರಲ್ಲಿ ವಿದ್ಯುಕ್ತವೆಂದಿದ್ದಾರೆ.

೩. ಎಷ್ಟೋ ಯತಿಗಳ ಜೀವನಚರಿತ್ರೆಯಲ್ಲಿ ಅವರು ಉಪನಯನದ ಬಗ್ಗೆ, ಅಥವಾ ಸನ್ಯಾಸಸ್ವೀಕಾರದ ಬಗ್ಗೆ ಬರೆದಿರುವುದಿಲ್ಲ.

೪. ಕಾಕೋಳು ರಾಘವೇಂದ್ರರೇ ತಮ್ಮ ಜಯತೀರ್ಥರ ಬಗ್ಗೆ ಕಥೆಯಲ್ಲಿ (ಪರಿಮಳ ಏಪ್ರಿಲ್) – ನರಸಿಂಹ ಭಟ್ಟರು ಸನ್ಯಾಸವನ್ನು ಸ್ವೀಕರಿಸಿದನೆಂದಿದ್ದಾರೆ. ಆದರೆ ವಿಧಾನವನ್ನು ಹೇಳಿಲ್ಲ.

೫. "ಸುಮಧ್ವವಿಜಯ"ದಲ್ಲಿ ನಾರಾಯಣಪಂಡಿತಾಚಾರ್ಯರು ಮಧ್ವಾಚಾರ್ಯರ ಸನ್ಯಾಸದ ಬಗ್ಗೆ ಸಂಪೂರ್ಣ ಮಾಹಿತಿಯನ್ನೂ, ವಿಧಿ ವಿಧಾನವನ್ನೂ ಹೇಳಿಲ್ಲ.

೬. ಸುಮಧ್ವ ವಿಜಯದಲ್ಲಾಗಲಿ, ಅಥವಾ ಬೇರೆ ಎಲ್ಲಾದರೂ ಆಗಲಿ, ಪದ್ಮನಾಭತೀರ್ಥರು, ನರಹರಿತೀರ್ಥರು, ಮಾಧವತೀರ್ಥರು, ಅಕ್ಷೋಭ್ಯತೀರ್ಥರು, ವಿಷ್ಣುತೀರ್ಥರು ಮತ್ತು ಹಲವಾರು ಯತಿಗಳು ಆಚಾರ್ಯ ಮಧ್ವರಿಂದ ಸನ್ಯಾಸವನ್ನು ಸ್ವೀಕರಿಸಿದರು ಎಂದು ಬರೆದಿದ್ದಾರೆ. ಆದರೆ ವಿಧಾನವನ್ನು ಹೇಳಿಲ್ಲ.

ಹಾಗೆಂದ ಮಾತ್ರಕ್ಕೆ ಅವರು ಶಾಸ್ತ್ರೋಕ್ತವಾಗಿ ಸ್ವೀಕರಿಸಿಲ್ಲವೆಂದು ಹೇಗೆ ಕಲ್ಪನೆ ಮಾಡುವುದು? ಕೇವಲ ವಿಧಿವಿಧಾನವನ್ನು ಹೇಳಿಲ್ಲ ಎಂದ ಮಾತ್ರಕ್ಕೆ ಅವರನ್ನು ಸರಿಯಾಗಿ ಸನ್ಯಾಸ ಸ್ವೀಕರಿಸಿಲ್ಲವೆನ್ನಲಾಗುವುದೇ?

ಅಕ್ಷೋಭ್ಯತೀರ್ಥರು ಆಚಾರ್ಯ ಮಧ್ವರ ನೇರ ಶಿಷ್ಯರಲ್ಲೊಬ್ಬರು. ಅಂದರೆ ಆಚಾರ್ಯರ ತತ್ತ್ವ ಸಿದ್ಧಾಂತವನ್ನು ನೇರವಾಗಿ ಕೇಳಿದವರು, ಬಲ್ಲವರು, ಅವರು ತಪ್ಪು ಮಾಡುತ್ತಾರೆಯೇ? ಈ ಕಲ್ಪನೆಯೇ ಅಸಮಂಜಸ

**ಆದ್ದರಿಂದ ಈ ಅನುಮಾನ ಕಾಕೋಳು ರಾಘವೇಂದ್ರರ** ಆಧಾರರಹಿತ **ಕಲ್ಪನೆಯಷ್ಟೆ.**

## 4. ಸನ್ಯಾಸ ಸ್ವೀಕರಿಸಿವುದಕ್ಕೆ ಮುಂಚೆ ಅವರು ಆತ್ಮ ಶ್ರಾದ್ಧ ಪ್ರಕ್ರಿಯೆ ಮಾಡಬೇಕು. ಆದರೆ ತಂದೆ ತಾತ ಇಬ್ಬರೂ ಇದ್ದಾಗ ಅವರು ಹೇಗೆ ಆತ್ಮಶ್ರಾದ್ಧ ಮಾಡಿದರು?

ಆಚಾರ್ಯ ಮಧ್ವರು ತಮ್ಮ "ಯತಿ ಪ್ರಣವಕಲ್ಪದಲ್ಲಿ" ಶ್ಲೋಕ 1 ಮತ್ತು 2ರಲ್ಲಿ, ಸನ್ಯಾಸಕ್ಕೆ ಮುಂಚೆ ಮಾಡಬೇಕಾದ ಕೆಲವು ಕರ್ತವ್ಯಗಳನ್ನು ಹೇಳಿದ್ದಾರೆ.

ಜೀವತ್ಛ್ರಾದ್ಧಂ ತಥಾ ಕ್ಷೌರಂ ಶಾಕಲಂ ಹೋಮ ಜಾಗರಂ ।
ಕೃತ್ವಾ ಪರೇದ್ಯು: ಪುಂಸೂಕ್ತ ವಿರಜಾಖ್ಯ ಸಹೋಮಕೇ ।
ಷಟ್ಕೃತ್ವಾ ಸನ್ಯಜೇತ್ ಬ್ರಹ್ಮಚಾರ್ಯಥವಾ ಗೃಹೀ ॥

ಸನ್ಯಾಸವನ್ನು ಸ್ವೀಕರಿಸುವವನು ಬ್ರಹ್ಮಚಾರಿಯಾಗಲೀ ಅಥವಾ ಗೃಹಸ್ಥನಾಗಲೀ ಸನ್ಯಾಸ ಪೂರ್ವದಲ್ಲಿ ಜೀವತ್ಛ್ರಾದ್ಧ, ಕ್ಷೌರ, ಶಾಕಲಹೋಮ, ಜಾಗರ, ಪುರುಷಸೂಕ್ತ ಹೋಮ, ಮತ್ತು ವಿರಜಾಹೋಮ ಮಾಡಿ ಸನ್ಯಾಸ ಸ್ವೀಕರಿಸಬೇಕು.

ಕಾಕೋಳು ರಾಘವೇಂದ್ರರ ಪ್ರಶ್ನೆ ಅವರು "ಸುಮಧ್ವವಿಜಯ"ವನ್ನು, "ಯತಿಪ್ರಣವಕಲ್ಪ"ವನ್ನು, ಸರಿಯಾಗಿ ಅರ್ಥ ಮಾಡಿಕೊಳ್ಳದೆ ಉಂಟಾಗಿದೆ

*ಕ್ರಿಯಾಕಲಾಪಮ್ ಸಕಲನ್ ಸ ಕಾಲವಿದ್ವಿಧಾನಮಾರ್ಗೇಣ ವಿಧಾಯ ಕೇವಲಮ್ ।*

**(ಸುಮಧ್ವ ವಿಜಯ ಚತುರ್ಥ ಸರ್ಗ ಶ್ಲೋಕ 31)**

ಭಕ್ಷನಾದಿ ಸಮಸ್ತಕರ್ಮ ಕೃತ್ವಾ ಭೂ: ಸನ್ನ್ಯಸ್ತಾ ಮಯಾ
ಇತ್ಯಾದಿ ಸಮಸ್ತನ್ಯಸನಾಭಿಧಾನಮ್ । (ಭಾವಪ್ರಕಾಶಿಕಾ)

ಆಚಾರ್ಯ ಮಧ್ವರು, ಶ್ರೀಪಾದರಾಜರು, ಶ್ರೀ ವಾದಿರಾಜರು, ಶ್ರೀ ವ್ಯಾಸರಾಜರು, ಶ್ರೀ ವಿಜಯೀಂದ್ರರು ಎಲ್ಲರೂ ಕೂಡ ಸನ್ಯಾಸವನ್ನು ಸ್ವೀಕರಿಸಿದ್ದು ಬಾಲ್ಯದಲ್ಲೇ. ಅವರೆಲ್ಲರಿಗೂ ತಂದೆ, ಎಲ್ಲರೂ ಇದ್ದರು. ಅವರೂ ಕೂಡ ಸನ್ಯಾಸವನ್ನು ಸ್ವೀಕರಿಸಿದ್ದಾರೆ. ಅಂದ ಮೇಲೆ ಎಲ್ಲಾ ಕಾರ್ಯಗಳನ್ನೂ ಅವರು ಮಾಡೇ ಸನ್ಯಾಸವನ್ನು ಸ್ವೀಕರಿಸಿದ್ದಾರೆ. ಸನ್ಯಾಸ ಧರ್ಮದ ಪ್ರಕಾರ – ಆಶ್ರಮ ಸ್ವೀಕಾರಕ್ಕೆ ಮುಂಚೆಯೇ ಅವರ ತಂದೆ ನಿಧನರಾಗಿದ್ದರೆ ಮಾತ್ರ ಅವರಿಗೂ ಶ್ರಾದ್ಧ ಮಾಡಬಹುದು. ಇಲ್ಲದಿದ್ದರೆ ಇಲ್ಲ. ಸನ್ಯಾಸ ಸ್ವೀಕರಿಸುವವನು ಆತ್ಮ ಶ್ರಾದ್ಧ ಮಾಡಿಕೊಳ್ಳಲೇಬೇಕು. ಅಕಸ್ಮಾತ್ ಸನ್ಯಾಸಾಶ್ರಮದ ನಂತರ ತಂದೆ ನಿಧನರಾದರೆ,

ಸನ್ಯಾಸಿಗೆ ಬೇರೆ ಏನೂ ಕಾರ್ಯವಿರುವುದಿಲ್ಲ. ಅವರು ಕೇವಲ ಪಿಂಡಕ್ಕೆ ಮಾತ್ರ ಗಂಗೋದಕವನ್ನು ಹಾಕಬೇಕು ಅಷ್ಟೇ. ಬಹುಶ: ಈ ವಿಷಯವನ್ನು ಅರಿಯದ ಕಾಕೋಳು ರಾಘವೇಂದ್ರರು ತಪ್ಪು ಅನುಮಾನ ಮಾಡಿದ್ದಾರೆ

## 5. ಧೋಂಡೂರಾಯರಿಗೆ ಮದುವೆಯಾಗಿತ್ತೆ?

ಉತ್ತರ – ಜಯತೀರ್ಥರಿಗೆ ಮದುವೆಯಾಗಿತ್ತು. ಮತ್ತು ಅವರ ತಂದೆಗಳು ತಮ್ಮ ಮಗನನ್ನು ಶ್ರೀ ಅಕ್ಷೋಭ್ಯತೀರ್ಥರಿಂದ ಬಲವಂತವಾಗಿ ಕರೆದುಕೊಂಡು ಬಂದು ಶಯನಗೃಹಕ್ಕೆ ಕರೆದುಕೊಂಡು ಹೋದರು. ಆದರೆ ಅವರ ಹೆಂಡತಿಗೆ ಅವರು ಸರ್ಪದಂತೆ ಕಂಡರು. ಇದಕ್ಕೆ ಹಲವಾರು ಆಧಾರಗಳಿವೆ.

ಅ) ಶ್ರೀಜಯತೀರ್ಥರ ನೇರ ಶಿಷ್ಯರಾದ ಶ್ರೀ ವ್ಯಾಸತೀರ್ಥರ "ಅಣು ಜಯತೀರ್ಥವಿಜಯ"ದಲ್ಲಿ ಶ್ಲೋಕ 11, 12, 13ರಲ್ಲಿ,

ಆ) "ಶ್ರೀ ಜಯತೀರ್ಥ ವಿಜಯ"ದಲ್ಲಿ (ಅಧ್ಯಾಯ4) ಹೇಳಿದ್ದಾರೆ.

ಇ) ಶ್ರೀ ಕೂಡ್ಲಿ ಅಕ್ಷೋಭ್ಯತೀರ್ಥಮಠದ ಶ್ರೀ ರಘುದಾಂತತೀರ್ಥರ "ಜಯತೀರ್ಥ ವಿಜಯ" ಗ್ರಂಥದಲ್ಲಿ ಶ್ಲೋಕ 28ರಿಂದ 33.

ಈ) ಶ್ರೀ ಸತ್ಯಪ್ರಿಯತೀರ್ಥ ವಿರಚಿತ ಶ್ರೀಜಯರಾಜಸ್ತುತಿ

ಉ) ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯರ "ಶ್ರೀ ಜಯತೀರ್ಥ ದರ್ಶನ"

ಊ) ಶ್ರೀ ಕೊರಟಿ ಶ್ರೀನಿವಾಸರಾಯರ "ಶ್ರೀ ಜಯತೀರ್ಥರು",

ಋ) ರಾಯರ ಮಠದ ಗ್ರಂಥವಾದ "ಗುರುಚರಿತೆ"ಯಲ್ಲಿ

## 6. ಜಯತೀರ್ಥರ ತಂದೆ ತಮ್ಮ ಚಿಕ್ಕ ವಯಸ್ಸಿನ ಸೊಸೆಯರ ಮುಂದಿನ ಭವಿಷ್ಯದ ಬಗ್ಗೆ ಏಕೆ ಚಿಂತನೆ ಮಾಡಲಿಲ್ಲ?

ಉತ್ತರ – ಇಲ್ಲಿ ಅವರ ತಂದೆ ಚಿಂತನೆ ಮಾಡಿರಬಹುದು. ಅದನ್ನು ಚಿಂತನೆ ಮಾಡೇ ಅವರು ಜಯತೀರ್ಥರನ್ನು ಅಕ್ಷೋಭ್ಯತೀರ್ಥರಿಂದ ಕರೆದುಕೊಂಡು ಬಂದದ್ದು. ಆದರೆ ವಿಫಲರಾದರು. ಇದು ಅನವಶ್ಯಕ ಗೊಂದಲದ ಪ್ರಶ್ನೆ ಅಷ್ಟೆ. **"ಹರಿಚಿತ್ತ ಸತ್ಯ ನರಚಿತ್ತಕ್ಕೆ ಬಂದದ್ದು ಲವಲೇಶವಯ್ಯ"** – ಇಲ್ಲಿ ಜಯತೀರ್ಥರ ಮಾತೇ ಸ್ಪಷ್ಟವಾಗಿದೆ "ನಾನು ಎಲ್ಲರಂತೆ ಲೌಕಿಕ ಜೀವನ ನಡೆಸಲು ಹುಟ್ಟಿಲ್ಲ, ಮೋಹ ಮಮತೆಗಳಿಂದ ನನ್ನನ್ನು ಬಂಧಿಸುವ ಪ್ರಯತ್ನ ಬಿಡಿ, ಮತ್ತೆ ನನ್ನನ್ನು ನನ್ನ ಗುರುಗಳ ಬಳಿ ಹೋಗಲು ಒಪ್ಪಿಗೆ ನೀಡಿ"

ಶ್ರೀಹರಿ ಅವರನ್ನು ಸನ್ಯಾಸಕ್ಕೆ ಕರೆದಿದ್ದಾನೆ, ಬಂದಿದ್ದಾರೆ ಅಷ್ಟೆ. ಸಕಲವೂ ಪರಮಾತ್ಮನ ನಿಯಮನದಂತೇ ನಡೆದಿರುತ್ತದೆ.

ಇದಲ್ಲದೆ, ಇನ್ನೂ ಕೆಲವು ಊಹಾಪೋಹಗಳನ್ನು ಸೃಷ್ಟಿಸಿದ್ದಾರೆ. ಇದಾವುದಕ್ಕೂ ಸರಿಯಾದ ಸಮಂಜಸವಾದ ಉತ್ತರ ಅವರ ಬಳಿಯೇ ಇದ್ದಂತಿಲ್ಲ. ಶ್ರೀ ಕಾಕೋಳು ರಾಘವೇಂದ್ರರು ತಮ್ಮ ಅನುಮಾನದಿಂದ ಮೂಲ ಕಥೆಯನ್ನೇ ತಪ್ಪಾಗಿ ಚಿತ್ರಣ ಮಾಡಲು ಹೊರಟಿದ್ದಾರೆ.

ಆದ್ದರಿಂದ ಎಲ್ಲ ಸಜ್ಜನರಿಗೂ ಇಂತಹ ಸಂಶಯಗಳಿಂದ ದೂರವಿರಿಸಿ, ೧) ಜಯತೀರ್ಥರು ಎತ್ತಾಗಿದ್ದರೇ, ೨) ಜಯತೀರ್ಥರು ವಿವಾಹವಾಗಿದ್ದರೇ, ೩) ಅಕ್ಷೋಭ್ಯತೀರ್ಥರಿಗೂ ವಿದ್ಯಾರಣ್ಯರಿಗೂ ವಾಗ್ವಾದವಾಗಿತ್ತೇ, ೪) ಸರಿಯಾದ ಸನ್ಯಾಸ ಸ್ವೀಕರಿಸಿದ್ದರೇ, ಮುಂತಾದ ಅನಗತ್ಯ ಗೊಂದಲದ ಅನುಮಾನವನ್ನು ಪ್ರಸರಿಸದಂತೆ ಮಾಡಿ, ನಮ್ಮನ್ನು ಉತ್ತಮ ಜ್ಞಾನ ಮಾರ್ಗದಲ್ಲಿ ಕೊಂಡು ಒಯ್ಯುವಂತೆ, ನಮ್ಮ ಗುರುಹಿರಿಯರ ಆಶೀರ್ವಾದವನ್ನು ಪಡೆಯೋಣ.

Collection by Narahari Sumadhwa
**Ph -07667704341; 09042729165**
For www.sumadhwaseva.com